ಹೋಗತಕ್ಕ ಕೇಸುಗಳಲ್ಲಿ ೫ ಭಾಗ ರದ್ದು ಆಗುವದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಕೇಸುಗಳು ಯಾವ ರೀತಿ ಇರುತ್ತದೋ ಅದರಮೇಲೆ ಹೋಗುತ್ತದೆ. Report on Prohibition Cases ನೋಡಿದರೆ, ಹೆಚ್ಚಾಗಿ cases ಪೋಲೀಸಿನವರು detect ಮಾಡಿ ಕೋರ್ಟುಗಳಲ್ಲಿ launch ಮಾಡಿದುದರಿಂದ, fines ಹಾಕಿರುವುದು ಗೊತ್ತಾಗುತ್ತದೆ. Penal Code ನೂರಾರು ವರ್ಷಗಳಿಂದ ಇಂಡಿಯಾ ದೇಶದಲ್ಲಿದ್ದರೂ ಕೂಡ ಖೂನಿಗಳು ನಡೆಯುವುದು, ಹೊಡೆದಾಟಗಳು ನಡೆಯುವುದು, ಇದ್ದೇ ಇದೆ. ಇದನ್ನು ತಪ್ಪಿಸುವದು ಕಷ್ಟವಾಗುತ್ತದೆ. ಆ ಸ್ವಭಾವ ಬಂದಿರತಕ್ಕ ಮನುಷ್ಯನು ಸಾಯುವ ತನಕ ಅದನ್ನು ಬಿಡುವುದಿಲ್ಲ. ಆದ್ದರಿಂದ Public ಇದರಮೇಲೆ ಧೈರ್ಯ ತೆಗೆದುಕೊಂಡು ಇದನ್ನು ತಡೆಗಟ್ಟುವುದಕ್ಕೆ ಅಲ್ಲಿ ವಾಸಮಾಡುವ ಪ್ರತಿಯೊಬ್ಬ ಖಾಸಗೀ ದೊಡ್ಡ ಮನುಷ್ಯರೂ, ಊರಿನವರೂ, ಇತರರೂ ಎಲ್ಲರೂ ಸೇರಿಕೊಂಡು ಇದನ್ನು ನಿಲ್ಲಿಸಬೇಕು. ಇದನ್ನು ಒಗ್ಗಟ್ಟಿನಿಂದ ಮಾಡಿದ ಹೊರತು ನಿಲ್ಲಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೂ ಕೂಡ ಸಾಧ್ಯವಾದಷ್ಟು ಪ್ರಯತ್ನಗಳನ್ನು ಮೈಸೂರು ಸರಕಾರದವರು ಪೋಲೀಸಿನ ಮುಖಾಂತರ ಬಂದೋಬಸ್ತು ಮಾಡಿದ್ದಾರೆ. ಆದರೆ ಕೆಲವು ದೋಷದೋಷಗಳು ಇರಬಹುದು. Public ಸಾಕಾದಷ್ಟು ಸಹಕಾರ ಕೊಟ್ಟರೆ ಧೈರ್ಯದಿಂದ ಈ ಕಾರ್ಯವನ್ನು ನಿಲ್ಲಿಸಬಹುದು. Illicit distillation ಯಾರು ಮಾಡುತ್ತಾರೋ ಅವರಿಗೆ ಶಿಕ್ಷೆ ಕೊಡಬೇಕೆಂದು ಪ್ರಯತ್ನಮಾಡಿದರೆ ನಿಜವಾಗಿ ನಿಲ್ಲುತ್ತದೆ ಎಂದು ನನಗೆ ಭರವಸೆ ಇದೆ. Prohibition ಪೂರ್ಣವಾಗಿ introduce ಮಾಡಬೇಕು ಎನ್ನುವ ವಿಷಯದಲ್ಲಿ ಆಗಲೇ ಹೇಳಿದ್ದೇನೆ. ನಿಜವಾಗಿ ಇದು ಒಂದು ಜಟಿಲ ಪ್ರಶ್ನೆ. ಇದು ಒಂದು ಪಾಲಿಸಿಗೆ ಸಂಬಂಧಪಟ್ಟುದು, ಎಲ್ಲರೂ ಒಪ್ಪಿಮಾಡತಕ್ಕ ವಿಷಯ. ಖಂಡಿತವಾಗಿ ಸರ್ಕಾರಕ್ಕೆ ಹೆಚ್ಚು ಸಹಾನುಭೂತಿ ಇದೆ. Prohibition Enquiry Committee ಯ ಶಿಫಾರ್ಸನ್ನು ಸರ್ಕಾರದವರು ಯೋಚನೆಮಾಡಿ ಯಾವ ರೀತಿ ಸರ್ಕಾರಕ್ಕೆ ಉಂಟಾಗುವ ಲುಕ್ಸಾನನ್ನು ಭರ್ತಿಮಾಡತಕ್ಕದ್ದು ಎಂಬ ವಿಷಯವನ್ನು ಎತ್ತಿದ್ದೇವೆ. ಸರ್ಕಾರಕ್ಕೆ ಅವರಿಂದ ಯಾವ ಉತ್ತರವೂ ಬಂದಿಲ್ಲ. ಎಲ್ಲಾ ಮಾನ್ಯಸದಸ್ಯರೂ ಯಾವ ರೀತಿ ಇದನ್ನು ಪೂರ್ಣವಾಗಿ ಜಾರಿಗೆ ತರಬೇಕು ಎಂದು ಅಭಿಪ್ರಾಯ ಇಟ್ಟುಕೊಂಡಿದ್ದಾರೋ ಅಷ್ಟೇಮಟ್ಟಿಗೆ ಸರ್ಕಾರಕ್ಕೂ ಅಭಿಪ್ರಾಯ ವಿದೆ. ಇದನ್ನು ಯಾವ ರೀತಿ implement ಮಾಡಬೇಕೆಂಬುದೇ ಸರ್ಕಾರಕ್ಕೆ ಈಗಿರುವ ಪ್ರಶ್ನೆ. ಸಾಧ್ಯವಾದಷ್ಟು ಮಟ್ಟಿಗೆ ಸರ್ಕಾರದವರು ಸರ್ವಪ್ರಯತ್ನಗಳನ್ನೂ ಮಾಡುತ್ತಾರೆಂದು ಹೇಳುತ್ತೇನೆ. ಮತ್ತು ಸರ್ಕಾರದವರು ಸಾಕಾದಷ್ಟು ಪ್ರಯತ್ನಗಳನ್ನು ಮಾಡಿ illicit distillation ಮತ್ತು ಅಕ್ರಮಗಳು ನಡೆಯುವ ಬಗ್ಗೆ ಕಾರ್ಯಕ್ರಮಗಳನ್ನು ತೆಗೆದು ಕೊಳ್ಳುತ್ತಾರೆ. ಶ್ರೀ ಸಿದ್ದಿ ಎ. ಥಾಮಸ್‌ರವರು ಹೇಳಿದ ಹಾಗೆ K.G.F. ನಲ್ಲಿ ಇದರ ಬಗ್ಗೆ ತಕ್ಕ ಬಂದೋಬಸ್ತು ಮಾಡಬೇಕು ಎನ್ನುವ ವಿಷಯವನ್ನು ಒಪ್ಪಿಕೊಳ್ಳುತ್ತೇನೆ, ಖಂಡಿತವಾಗಿ ಖಾಸಗೀ ಮನುಷ್ಯರೂ ಮಾನ್ಯಸದಸ್ಯರೂ ಇದರಲ್ಲಿ ಸಹಕರಿಸಿದರೆ ಹೆಚ್ಚಿನ ರೀತಿಯಲ್ಲಿ ಇದನ್ನು ತಡೆಗಟ್ಟಬಹುದು ಎಂದು ಒಪ್ಪಿಕೊಳ್ಳುತ್ತೇನೆ. Policy ಹೀಗಿರುವುದರಿಂದ ಈಗ ಈ ನಿರ್ಣಯಕ್ಕೆ ಬೆಂಬಲಕೊಡುವುದಕ್ಕಾಗುವುದಿಲ್ಲ. ಮುಂದೆಯೂ ಆಗುವುದಿಲ್ಲ, ಮುಂದಕ್ಕೆ ಇಟ್ಟ ಹೆಜ್ಜೆಯನ್ನು ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲ. ಆದ್ದರಿಂದ ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—What does the Mover of the Resolution say ?

Sri P. M. SWAMIDURAI.—I submitted this resolution to the Hon'ble House to voice out the consensus of feelings of Kolar Gold Fields with regard to prohibition. It is nothing more or less. But watching the trend of the opinion of the majority of the members of this Hon'ble House, I do not press it.

The resolution was, by leave, withdrawn.

Mr. SPEAKER.—Resolution No. 11. Sri Narasimha Reddy. He is not present. Resolution No. 12. Sri Palaniyappan.

Sri M. PALANIYAPPAN.—In view of the fact that a Bill is coming up before this Assembly on the Re-organisation of States, I do not intend to move my resolution.

Mr. SPEAKER.—Resolution No. 13. Sri Rame Gowda. Hs is not present. Resolution No. 14. Sri Devaraj Urs. He is not present. Resolution No. 15. Sri P. R. Ramaiya.

No. 15. Propagation of Indian Culture,

Sri P. R. RAMAIYA (Basavangudi).—Sir, the resolution is like this :

> "This Assembly is of the opinion that with a view to propagating Indian culture among the people yet greater encouragement be given to learned Kannada and Sanskrit scholars in the State by awarding them honorarium for such work."

This Resolution does not need a lengthy speech. The point is contained in the resolution itself. India's greatness lies in its culture. The ancient culture of India is such that it has attracted the attention of the whole world. Even today, in foreign countries, the savants and scholars have been exploring into the ancient books of

(SRI P. R. RAMAIYA.)

India and trying to find out new truths which would help us to tide over the evils of modern civilisation. Sir, our ancient culture is a mine of blessing to humanity. It is based upon spiritual unity and it aims at the unity of mankind. India has been a pioneer and it has conserved the culture for long. Now due to the impact of the modern educational system and the modern civilization methods, our ancient culture is being neglected. Sufficient attention is not being given to it. We find it very encouraging to find that the Government of India has been thinking of reviving this ancient culture and encouraging the establishment of academies and holding conferences. A few days ago at New Delhi under the Presidentship of our Prime Minister Pandit Nehru, a conference of poets was held. It was very encouraging to listen to what took place there. I was one of the listeners and I am very proud to own that our Kannada Poet Sri Bendre was there and he sang a song which drew the admiration of all the poets that had assembled there. This culture is a thing which has to be nourished and it cannot be found in the market place. People have to give time and attention and burn midnight oil. They have to devote their whole life for conserving this culture. The conditions of modern life, the conditions of eking out their livelihood is such that there are very few people in this land today who can do justice to the ancient culture of the land and conserve it. It is a matter which ought to draw the attention of the lovers of this country, our leaders and those at the helm of affairs in this land. We know, if we study history, that a succession of kings, rajas and maharajas nourished these pundits, scholars and vidwans. The tradition of India is such that we had a king called Bhoja who encouraged vidwans and asked them to recite poetry. It is said, Sir,—I wish to bring to the notice of the House—that he gave *akshara laksha, i.e.*, for each word he gave a lakh of rupees, as many lakhs of rupees as there were many words. We have not got king Bhojas.

MR. SPEAKER.—Does the Hon'ble Member require more time?

SRI P. R. RAMAIYA.—Yes, Sir.

MR. SPEAKER.—Then you may continue after lunch. The House will adjourn and meet at 3-30.

The House adjourned for Lunch at Three of the Clock and reassembled at Thirty Minutes past Three of the Clock.

[MR. DEPUTY SPEAKER in the Chair.]

SRI P. R. RAMAIYA.—Sir, I was speaking about the encouragement that was being given to vidwans, pandits and scholars by our ancient rulers. I was saying that the legendary King Bhoja was giving "*Akshraalaksha*". During the time of King Vikramadithya, he had nine great poets in his court; they were called Navanidhi or Navamanis.

Sir, coming to recent time, the Vijayanagar Kings were very liberal in encouraging these Vidwans, pandits and scholars. It is during their time that many great poets brought out their works. Sir, Mysore also has a great past in this direction. Kings were not wanting here in Mysore who themselves wrote poems and encouraged poets to write poems.

Coming to very recent times, Mummadi Krishnarajawadiyar was himself a great scholar and a pandit and a poet also. During his time he revived this ancient learning in the State of Mysore. During the time of Chamaraja Wadiyar there were very many great poets who brought glory to this State and also to Kannada language. I may mention in this connection, there was a great poet called Basappa Sastry who translated Kalidasa's Shakuntala into Kannada.

Sir, I would like to go to Sanskrit as well as the Kannada works. Sir, the Kannada work, though it is a rendering, it is in no way inferior in many respects to its original. Sir, Basappa Sastry's work is really a monument in Kannada literature. During the time of Krishnaraja

Wadiyar IV, he nourished and nurtured these scholars. The tradition of the Palace during his time and the time of his predecessor was to maintain a number of vidwans. Stipend was being given to these Vidwans called *Vidwath Sambala*. Sir, they were being paid during those days Rs. 5, Rs. 10 Rs. 15 etc. Though these were only token payment, there was recognition of the merit of those vidwans.

Sir, the tradition of India has been all along to give encouragement to those vidwans of Sanskrit and also of Kannada. Sir, these vidwans had no other work. They were asked to concentrate on their studies and write books. Now the times have changed. We are now living in days of democracy. There is no monarchy in India now. We are a republic. And in Mysore we have responsible Government and power is in the hands of the people. It is therefore very necessary that we remember what they did to those scholars and try to see how they are living today, whether any encouragement is being given to them. It is found that the number of these pandits is going down, practically dwindling. There is a proverb in Kannada in respect of these scholars who have devoted their whole life for studies of the Vedas: ಅಧ್ಯಯನ ಮಾಡಿದವನಿಗೆ ಮಧ್ಯಾಹ್ನಕ್ಕೇ ಇಲ್ಲವಲ್ಲಾ. That is the fate of these scholars. It is for this House to consider if it is not necessary to do something for these people who have devoted themselves to ancient learning. I mean not only sanskrit scholars but to Kannada, Tamil, Telugu and other regional language scholars. I have to say something which may look very unpleasant to those people who have come out or who come out of universities, schools and colleges. All these Universities, schools and colleges cannot produce one Kalidasa, one Shakespeare, one Bhavabhuti or one Tagore. These universities, schools and colleges produce only mechanical products who seek Government employment. There is not a ray of desire in the hearts of these school going children or in the hearts of these college going students to do something for the spread of culture. They want appointments. As soon as they take their degrees they knock at the doors of Government offices or industrial concerns and want to eke out some pittance. This is our education. No doubt this kind of education has produced some great men. But I have to say that these great men are produced in spite of this education. There was something original in them and they became great in spite of the ill effects of this kind of education. Therefore let us not bank too much upon our universities, schools and colleges as far as ancient learning is concerned. This ancient learning must be protected and if we do not protect it, the essence of India will be lost, what they say in Kannada the 'ತಿರುಳು' will be lost, and we will only be husks and the people of this generation will be blamed by the posterity for having neglected this ancient culture. Therefore it is necessary that this House should think deeply as to how we can give encouragement to these men who have devoted themselves to ancient learning. We need not look down upon them and we need not have any communal outlook. Learning belongs to no particular community. Art belongs to no particular community. Culture belongs to no particular community. Sanskrit is not the monopoly of one community. So also Kannada is not the monopoly of one community. All people have to devote themselves to these languages. Therefore it is necessary to find some way of promoting this culture. It is very good of our present Chief Minister Sri K. Hanumanthaiya to have thought of introducing cultural propaganda. The cultural propaganda is being done these four years. But this propaganda is carried on in some way; it does not touch these people of ancient learning. What is being done is some gamaka people go and read the Mahabharatha or something else, and some *lavanigars* go and sing some *lavani*. This is only of a temporary nature. We should do something permanent, something tangible. I realise that some scholars of real

(Sri P. R. Ramaiya.)

merit are being encouraged; but it is only in a temporary way. We should do something of permanent value. We should protect them. We should grant them something to maintain their livelihood. We should not create in them the thought that they are helpless because of their having pursued ancient learning. They should not worry themselves of how to maintain themselves and their families. Something must be done for them. That was the spirit of the ancient times. In modern days when we are busy with ecnomic approach, perhaps we devote very little time for the development of culture. We all have become economic beings. The man of today is measured in terms of economy. Food, clothing and shelter, medicine, this thing and that thing and nothing which is abiding in human nature. Therefore this august House should think as to how we can promote these men, the culture which is embedded in those men. My suggestion is that we may give some stipends to those men in the way in which it was being given by the Maharajas. Another way is to encourage the old patasala system of education. The product of that patasala is a greater scholar than a modern graduate. The way in which they used to teach the student is something which makes a permanent and abiding impression in the student. We have to encourage the starting of these patasalas. We should spend more money than we are now spending. What we are spending now is not enough. We should have Sanskrit books in all these libraries, Kannada books also and other regional language books. We should encourage them. No doubt we are encouraging them. But it is only courtesy encouragement. It is no use to be merely courtious. We must do something more. Therefore I suggest that this matter be taken into consideration by Government. I am not in a position to give off hand suggestions as to how it should be done. But I only say before this House that there is need for encouraging men of ancient learning and culture. Sir, what is culture? Culture is not a thing which can be defined easily. It is something like the fragrance of a flower. You cannot separate fragrance from the flower. You can only feel it. Supposing you ask me to take the colour of the sky separately, I cannot do it. It cannot be done. These are things not concrete but abstract in nature which can only be felt and realised. Therefore, culture is something as I said earlier which cannot be found in the market place like that. It is a very precious thing. It cannot be found everywhere. We cannot get as much gold as we can get iron; we cannot get as much gold as we can get coal. Nature is very stingy in producing gold. So also men of culture cannot be found in abundance. You cannot find them in masses. Today we are accustomed to produce things in mass. Can we produce men of culture in a mass like that? That cannot be done. They can only be found in some places. Therefore we, Sir, as people who believe in culture have to do something towards culture. We believe in agriculture; we believe in horticulture; should we not believe in human culture? We are spending so much on parks through the Gardens Department. Should we not spend some money on these specimens of human culture? Therefore, Sir, I appeal to this House to consider this resolution in a sympathetic manner rising above communal considerations, caste considerations or racial considerations. Culture is something which belongs to everyone.

Mr. DEPUTY SPEAKER.—Resolution moved:

> "This Assembly is of the opinion that with a view to propagating Indian culture among the people yet greater encouragement be given to learned Kannada and Sanskrit scholars in the State by awarding them honorarium for such work."

*ಶ್ರೀ ಎಂ. ಲಿಂಗಣ್ಣ (ನಂಜನಗೂಡು).—ಸ್ಪ್ಯಾಮಿ, ಈ ಒಂದು ನಿರ್ಣಯವನ್ನು ಬಹಳ ಸಂತೋಷದಿಂದ ಸಮರ್ಥನೆಮಾಡಿ ಅದರ ಬಗ್ಗೆ ನಾಲ್ಕಾರು ಮಾತುಗಳನ್ನು ಹೇಳಬೇಕೆಂದು ಪ್ರಯತ್ನಪಡುತ್ತೇನೆ. ಮುಖ್ಯವಾಗಿ ಇವಕ್ಕೆ ಸಂಬಂಧಪಟ್ಟ ಮಂತ್ರಿಗಳು ಕೂಡ ಈ ನಿರ್ಣಯವನ್ನು ತಳ್ಳಿಹಾಕದೆ ಇದರ ಅಗತ್ಯತೆಯನ್ನು ಕಂಡುಕೊಂಡು, ನಿರ್ಣಯವನ್ನು ಒಪ್ಪಿ

ಕೊಂಡು, ನಿರ್ಣಯದ ರೂಪುರೇಷೆಗಳನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನಪಡಬೇಕು ಎಂದು ನಾನು ನಮಿನಯ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಶ್ರೀ ರಾಮಯ್ಯನವರು ತಂದಿರತಕ್ಕ ಈ ನಿರ್ಣಯವನ್ನು ಒಂದು ದೃಷ್ಟಿಯಿಂದ ಯೋಚನೆ ಮಾಡುತ್ತಿರುವ ಸಮಯದಲ್ಲಿ ಮೈಸೂರು ಸರ್ಕಾರದವರು ಕೆಲವು ಬಾಬುಗಳಿಗಾಗಿ ಮಾಡುತ್ತಿರುವ ಹಣದ ಖರ್ಚನ್ನು ನಿಲ್ಲಿಸಿ, ಈ ನಿರ್ಣಯವನ್ನು ಒಪ್ಪಿಕೊಂಡು, ಆ ಹಣವನ್ನು ಈ ಬಾಬಿಗಾಗಿ ಖರ್ಚುಮಾಡಿ, ದೇಶದಲ್ಲಿ ನಾವು ಸಂಸ್ಕೃತಿ ಪ್ರಸಾರ ಮಾಡಬೇಕು ಎಂದು ಏನು ಪ್ರಯತ್ನಪಡುತ್ತಿದ್ದೀವೆಯೋ, ಆ ಪ್ರಯತ್ನವನ್ನು ಸುಲಭರೂಪದಲ್ಲಿ, ಶಾಶ್ವತ ರೂಪದಲ್ಲಿ ಮಾಡಬೇಕಾದ ಕೆಲಸವೆಂದು ನನ್ನ ಬಯಕೆ ಮತ್ತು ನನ್ನ ಆಶೆ. ಅವರು ನಿರ್ಣಯದಲ್ಲಿ ಹೇಳಿರತಕ್ಕ ಮಾತುಗಳೇನೆಂದರೆ, ಈಗ ಕನ್ನಡದಲ್ಲಿರತಕ್ಕ ಬರೆಹಗಾರರು ಮತ್ತು ಪಂಡಿತರು ಮತ್ತು ಸಂಸ್ಕೃತದಲ್ಲಿರತಕ್ಕ ಬರೆಹಗಾರರು ಮತ್ತು ಪಂಡಿತರು, ಇವರುಗಳಿಗೆ ಸರ್ಕಾರದವರು ಸಂಭಾವನೆ ರೂಪದಲ್ಲಿ ಸಹಾಯವನ್ನು ಕಲ್ಪಿಸಿಕೊಡಬೇಕು ಎಂದು. ಇದೇ ಅವರ ಮುಖ್ಯ ಉದ್ದೇಶ. ಈ ನಿರ್ಣಯ ಈ ರೂಪದಲ್ಲಿ ಬಂದಿರುವುದನ್ನು ನಾನು ಯಾತಕ್ಕೆ ಮೊದಲು ಸ್ವಾಗತಿಸಬೇಕು ಎಂದು ಹೇಳಿದೆನೆಂದರೆ, ಈ ನಿರ್ಣಯದ ಮೂಲ ಉದ್ದೇಶವಾದರೂ ಕೂಡ ನಾವು ಯಾವ ಉದ್ದೇಶವಿಂದ ಸಂಸ್ಕೃತಿಯನ್ನು ಪ್ರಚಾರ ಮಾಡಬೇಕು ಎಂದು ನಿರ್ಧರ ಮಾಡಿಕೊಂಡು ಇದಕ್ಕಾಗಿ ಹತ್ತು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀವೆಯೋ, ಅದೇ ಆಗಿದೆ. ಆ ಮೂಲ ಉದ್ದೇಶವನ್ನು ಸಾಧಿಸುವುದಕ್ಕೆ ಈ ಮುಖೇನ ಮಾಡಬೇಕು ಎನ್ನುವುದೇ ನನ್ನ ವಾದ. ಸರ್ಕಾರದವರು ಶ್ರೀ ರಾಮಯ್ಯನವರು ತಂದಿರತಕ್ಕ ನಿರ್ಣಯವನ್ನು ಹಣಕಾಸಿನ ಮುಗ್ಗಟ್ಟಿನ ದೃಷ್ಟಿಯಿಂದ ತಳ್ಳಿಹಾಕಬಾರದು ಎಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ನಿರ್ಣಯವನ್ನು ಒಪ್ಪಿಕೊಂಡರೆ, ಅದನ್ನು ಕಾರ್ಯಗತ ಮಾಡತಕ್ಕ ಯಾವುದಾದರೂ ಒಂದು ಸಂಸ್ಥೆ ಬೇಕ್ಲೇ, ಬೇಡವೇ ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಈಗಾಗಲೇ ಮೈಸೂರು ಸರ್ಕಾರದಲ್ಲಿ ಸಂಗೀತ, ನೃತ್ಯ, ನಾಟಕ ಇವುಗಳ ಸಂಬಂಧವಾದ ಒಂದು ಅಕಾಡೆಮಿಯನ್ನು ಸ್ಥಾಪನೆ ಮಾಡಿದ್ದಾರೆ. ಈ ಅಕಾಡೆಮಿಯನ್ನು ತಾವು ಉಪಯೋಗಿಸಿಕೊಂಡು, ಮೈಸೂರು ಸರ್ಕಾರದವರು ಖರ್ಚು ಮಾಡುತ್ತ ಇರತಕ್ಕ ಹತ್ತು ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ವಿನಿಯೋಗಿಸಿದ್ದರೆ ಒಳಿತು ಎನ್ನುವುದು ನನ್ನ ಭಾವನೆ. ಏಕೆಂದರೆ, ನಾವು ಹತ್ತು ಲಕ್ಷ ರೂಪಾಯಿಗಳನ್ನು ಖರ್ಚುಮಾಡತಕ್ಕ ವಿಧಾನ ಮತ್ತು ಈ ಹಣವನ್ನು ಖರ್ಚುಮಾಡತಕ್ಕ ಮೂಲ ಉದ್ದೇಶ, ಇವೆರಡನ್ನೂ ಈ ನಿರ್ಣಯದ ಸಂಬಂಧದಲ್ಲಿ ಸ್ವಲ್ಪ ತುಲನ ಮಾಡುವುದು ಸಾಧುವಾದದ್ದು ಎಂದು ನಾನು ಹೇಳುತ್ತೇನೆ.

ಈ ಹತ್ತು ಲಕ್ಷ ರೂಪಾಯಿಗಳ ಬಗ್ಗೆ ನಾಲ್ಕಾರು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಮೈಸೂರು ಸರ್ಕಾರದವರ ಉದ್ದೇಶ ಈ ಹಣವನ್ನು ಖರ್ಚುಮಾಡಿ ಇಡೀ ದೇಶದಲ್ಲಿ ಸಂಸ್ಕೃತಿ ಪ್ರಚಾರವನ್ನು ಮಾಡಬೇಕು ಎಂಬುದೇ ಆಗಿದೆ. ಇದು ನಿಜವಾಗಿಯೂ ಬಹಳ ಉದಾತ್ತವಾದ ಉದ್ದೇಶ. ಅದರ ಬಗ್ಗೆ ಯಾರೂ, ಏನೂ ಟೀಕೆ ಮಾಡುವುದಕ್ಕೆ ಮನಸ್ಸು ಮಾಡುವುದಿಲ್ಲ. ಆದರೆ ಹತ್ತು ಲಕ್ಷರೂಪಾಯಿಗಳನ್ನು ಖರ್ಚು ಮಾಡುವ ಯಾವ ಯಾವ ವಾಹಕಗಳಿವೆ, ಯಾವ ಯಾವ ಏಜೆನ್ಸಿಗಳಿವೆ, ಅವುಗಳ ಮುಖೇನ ಈ ಹಣವನ್ನು ಆ ಮೂಲ ಉದ್ದೇಶದ ಗುರಿಯನ್ನು ಮುಟ್ಟುವುದಕ್ಕೆ ಖರ್ಚುಮಾಡುತ್ತಿರುವುದು ಅಷ್ಟು ಸಾಧುವಾಗಿಲ್ಲ ಎನ್ನುವುದೇ ನನ್ನ ಭಾವನೆ. ತಾವು ಏನು ಸಂಸ್ಕೃತಿಯನ್ನು ಪ್ರಚಾರ ಮಾಡಬೇಕು ಎಂದು ಹೊರಟಿದ್ದೀರೋ ಅದಕ್ಕಾಗಿ ಅನೇಕ ಭಾಷಣಗಳು, ಅನೇಕ ರಾವಣಿಗಳು ಮತ್ತು ಅನೇಕ ಗಮಕಗಳನ್ನು ಏರ್ಪಾಡು ಮಾಡಿದ್ದೀರಿ. ಅವು ನಿಜವಾಗಿಯೂ ಕೂಡ ಸಂಸ್ಕೃತಿಯನ್ನು ಜನರಿಗೆ ಹರಡಲಾರವು ಎನ್ನುವುದೇ ನನ್ನ ನಿಜವಾದ ಅಭಿಪ್ರಾಯ. ಸರ್ಕಾರದವರು ಹಾಕಿರತಕ್ಕ ಸಂಸ್ಕೃತಿ ಯೋಜನೆಯ 20-30 ಸಭೆಗಳಲ್ಲಿ ನಾನು ಭಾಗವಹಿಸಿದ್ದೇನೆ. ಹಾಗೆ ಭಾಗವಹಿಸಿ ಆ ಸಭೆಗಳಲ್ಲಿ ಆಗಿರತಕ್ಕ ಕಾರ್ಯಕಲಾಪಗಳನ್ನು ನೋಡಿ ಅದರಿಂದ ಸಂಸ್ಕೃತಿ ಪ್ರಚಾರವಾಗಿದೆಯೇ, ಅದರಿಂದ ಜನಗಳಮೇಲೆ ಏನಾದರೂ ಪರಿಣಾಮವಾಗಿದೆಯೇ ಎಂದು ತೂಕಮಾಡಿ ಹೇಳುತ್ತಿದ್ದೇನೆ. ಸರ್ಕಾರದವರ ಉದ್ದೇಶ, ನಾನು ಮೊದಲೇ ಹೇಳಿದ ಹಾಗೆ, ಬಹಳ ಘನತರವಾದ ಉದ್ದೇಶ. ಆದರೆ, ಆ ಉದ್ದೇಶವನ್ನು ಸಫಲಗೊಳಿಸುವುದಕ್ಕೆ ನಾವು ಯಾವ ಒಂದು ಸಾಧನೆಯನ್ನು ಉಪಯೋಗಿಸುತ್ತಿದ್ದೀವೆಯೋ ಆ ಸಾಧನೆ ಅಷ್ಟು ಸಮರ್ಪಕವಾಗಿಲ್ಲ, ಪ್ರಯೋಜನಕಾರಿಯಾಗಿಲ್ಲ ಎನ್ನುವುದೇ ನನ್ನ ಭಾವನೆ. ಅದೇ ಹತ್ತು ಲಕ್ಷ ರೂಪಾಯಿಗಳನ್ನು ಈಗ ತಂದಿರುವ ನಿರ್ಣಯವನ್ನು ಕಾರ್ಯಗತ ಮಾಡುವುದಕ್ಕೆ ಉಪಯೋಗಿಸಿದರೆ ಅನುಕೂಲವಾಗುತ್ತದೆಯೇ ಎಂಬುದನ್ನು ಈ ಸಮಯದಲ್ಲಿ ಯೋಚನೆ ಮಾಡಬೇಕು.

ಶ್ರೀ ರಾಮಯ್ಯನವರು ಈ ನಿರ್ಣಯದ ಮೂಲಕ ಕನ್ನಡ ಮತ್ತು ಸಂಸ್ಕೃತ ಭಾಷೆಯಲ್ಲಿನ ಬರೆಹಗಾರರಿಗೆ ಮತ್ತು ಪಂಡಿತರಿಗೆ ಮೈಸೂರು ಸರ್ಕಾರದವರು ಹಣವನ್ನು ಸಂಭಾವನೆ ರೂಪದಲ್ಲಿ ಕೊಡಬೇಕು ಎಂದು ಕೇಳಿದ್ದಾರೆ. ಪಂಡಿತರು ಮುಂತಾದವರನ್ನು ಸನ್ಮಾನಿಸಿ ಸಂಭಾವನೆ ಕೊಡತಕ್ಕ ಪದ್ಧತಿ ಅನೂಚಾನವಾಗಿ ಬಂದಿರತಕ್ಕ ಪದ್ಧತಿ. ಹಿಂದೆ ರಾಜ, ಮಹಾರಾಜರುಗಳು, ಶ್ರೀ ರಾಮಯ್ಯನವರು ಹೇಳಿದಹಾಗೆ, ಬರೆಹಗಾರರು, ಪಂಡಿತರು ಇಂಥವರುಗಳಿಗೆ ರಾಜಾಸ್ಥಾನದಲ್ಲಿ ಮನ್ನಣೆಯನ್ನು ಕೊಟ್ಟು ಅವರಿಗೆ ಪುರಸ್ಕಾರವನ್ನು ಕೊಟ್ಟು, ಸಂಭಾವನೆ ಕೊಡತಕ್ಕ ಪದ್ಧತಿ ಇತ್ತು. ಆದರೆ ಈ ಹೊತ್ತು ನಾವು ಪ್ರಜಾಪ್ರಭುತ್ವ ಬಂದ ಮೇಲೆ ಈ ವಿಷಯದಲ್ಲಿ ಹೆಚ್ಚಿಗೆ ನಿಗಾ ಕೊಡುವುದಕ್ಕೆ ಅವಕಾಶವಿದೆಯೋ, ಇಲ್ಲವೋ, ಅಂತೂ ಅವರ ಬಗ್ಗೆ ನಿಗಾ ಕೊಟ್ಟಿಲ್ಲ.

4 P.M.

ಇನ್ನುಮೇಲಾದರೂ ಕೂಡ ಪ್ರೋತ್ಸಾಹ ಕೊಡತಕ್ಕದ್ದು ಧರ್ಮ ಮತ್ತು ಸೂಕ್ತ. ಇನ್ನೊಂದು ವಿಷಯ ಹೇಳಬೇಕೆಂದರೆ ಈ ದೃಷ್ಟಿಯಿಂದ ಹೆಮ್ಮೆಪಡುವ ರೀತಿಯಲ್ಲಿ ನಮ್ಮ ಭಾರತ ಸರ್ಕಾರದವರು ಬರವಣಿಗೆಗಾರರಿಗೆ ಪೊನ್ನತಾನೆ ಸಂಭಾವನೆ ಕೊಟ್ಟಿದ್ದಾರೆ. ನಮ್ಮಲ್ಲಿ ಕನ್ನಡದಲ್ಲಿ ಅತ್ಯಂತ ಶ್ರೇಷ್ಠ ಕವಿಯಾದಂಥ ಕುವೆಂಪುರವರಿಗೆ ಅಂದರೆ ಶ್ರೀ ಕೆ. ವಿ. ಪುಟ್ಟಪ್ಪನವರಿಗೆ ಸಹ ಅವರು ಬರೆದಿರುವ ಶ್ರೇಷ್ಠವಾದ ರಾಮಾಯಣ ಕಾವ್ಯಕ್ಕಾಗಿ ಸಂಭಾವನೆ ದೊರೆತಿದೆ. ಅಂದರೆ, ಭಾರತ ಸರ್ಕಾರದವರು ಕೂಡ ಈ ಒಂದು ಮೂಲೋದ್ದೇಶವನ್ನು, ತತ್ವವನ್ನು ಒಪ್ಪಿದ್ದಾರೆ. ಆದರೆ ಭಾರತ ಸರ್ಕಾರ ಸಂಭಾವನೆ ನೀಡುತ್ತಿರುವುದು ಇಡೀ ಭರತಖಂಡಕ್ಕೆ ಸಂಬಂಧಪಟ್ಟುದಾಗಿರುವುದರಿಂದ ಆ ಒಂದು ಸೌಲಭ್ಯ ಅಥವಾ ಹಣದ ಸಹಾಯ ಹೆಚ್ಚುಮಂದಿಗೆ ದೊರೆಯದಿರುವ ಸಂದರ್ಭ

(ಶ್ರೀ ಎಂ. ಲಿಂಗಣ್ಣ.)

ವಿದೆ. ಆದ್ದರಿಂದ ಆ ಕೆಲಸವನ್ನು ತದ್ಯೋಪದಲ್ಲಿ ಸಂಬಂಧಪಟ್ಟ ಸಂಸ್ಥಾನಗಳವರು ಅಂದರೆ, ಮೈಸೂರು ಸರ್ಕಾರ ಮತ್ತು ಇತರ ಸರ್ಕಾರಗಳು ಕೈಗೊಂಡರೆ ಭಾರತ ಸರ್ಕಾರ ಮಾಡುವ ಕೆಲಸಕ್ಕೆ ಹೆಚ್ಚು ಉತ್ತೇಜನ ಕೊಟ್ಟಹಾಗಾಗುತ್ತದೆ ಮತ್ತು ನಮ್ಮ ಸಂಸ್ಥಾನಕ್ಕೂ ಅನುಕೂಲವಾಗುತ್ತದೆ, ಅಲ್ಲದೆ ನಮ್ಮ ಸಂಸ್ಥಾನದಲ್ಲಿ ಈಗಾಗಲೆ ಈ ಸಂಬಂಧವಾದ ಕಾರ್ಯಕ್ರಮ ಒಂದು ರೀತಿಯಲ್ಲಿ ನಡೆಯುತ್ತಿದೆ. ನಾವು ಭಾರತ ಸರ್ಕಾರಕ್ಕಿಂತ ಮುಂಚಿತವಾಗಿ ಸಂಸ್ಕೃತಿ ಪ್ರಚಾರ ಮಾಡಬೇಕೆಂದು ಹತ್ತು ಲಕ್ಷ ರೂಪಾಯಿಗಳನ್ನು ಈಗಾಗಲೆ ಖರ್ಚುಮಾಡುತ್ತಿದ್ದೇವೆ. ಈ ಹತ್ತು ಲಕ್ಷ ರೂಪಾಯಿಗಳನ್ನು ಸಂಪೂರ್ಣವಾಗಿ ಈ ನಿರ್ಣಯದಲ್ಲಿ ಸೂಚಿತವಾಗಿರುವ ಕೆಲಸಕ್ಕಾಗಿ ಮುಡುಪಾಗಿಟ್ಟರೆ ಅದರ ಪರಿಣಾಮವು ಬಹಳ ಚೆನ್ನಾಗಿರುತ್ತದೆ. ಈ ಹತ್ತು ಲಕ್ಷ ರೂಪಾಯಿಗಳನ್ನು ಅನೇಕ ಬರೆಹಗಾರರಿಗೆ ಸಂಭಾವನೆ ರೂಪದಲ್ಲಿ ಕೊಟ್ಟು, ಅವರು ಬರೆದಿರುವ ಕೃತಿಗಳನ್ನು ಪಬ್ಲಿಷ್‌ಮಾಡಿ ಅವನ್ನು ಬಹಳ ಕಡಮೆ ಬೆಲೆಗೆ ಜನಸಾಮಾನ್ಯರಿಗೆ ಒದಗಿಸಿದರೆ ಅದರ ಪರಿಣಾಮವೇನಾಗುತ್ತದೆಂಬುದನ್ನು ನಾವು ಯೋಚನೆ ಮಾಡಬೇಕು. ಈಗಾಗಲೇ ತಮಗೆ ಗೊತ್ತಿರಬಹುದು, ಕನ್ನಡ ನಾಡಿನಲ್ಲಿ ಕಾದಂಬರಿಕಾರರ ಒಂದು ಯುಗ ಆರಂಭವಾಗಿ ಕಾದಂಬರಿಗಳನ್ನು ಬಹಳ ಹೆಚ್ಚಿನ ಬೆಲೆಗೆ ಮಾರದಿರುವ ನಂದರ್ಭವೊದಗಿ ಕಾದಂಬರಿಗಳನ್ನು ಓದದಿದ್ದ ಅನೇಕರು ಬೆಲೆ ಕಡಮೆಯಾಗಿರುವುದರಿಂದ ಹೆಚ್ಚಿನ ಪ್ರಮಾಣವಲ್ಲಿ ಓದುವುದಕ್ಕೆ ಪ್ರಾರಂಭಿಸಿದ್ದಾರೆ. ಅದೇ ರೀತಿಯಲ್ಲಿ ಸಂಸ್ಕೃತಿ ಪ್ರಚಾರಕ್ಕಾಗಿ ಮೀಸಲಾಗಿಟ್ಟಿರುವ ಹತ್ತು ಲಕ್ಷ ರೂಪಾಯಿಗಳನ್ನು ಒಳ್ಳೊಳ್ಳೆಯ ಗ್ರಂಥಗಳನ್ನು ಬರೆಸಲು ಮೇಧಾವಿಗಳಾದ ಕನ್ನಡ ಪಂಡಿತರಿಗೂ ಮತ್ತು ಸಂಸ್ಕೃತ ಪಂಡಿತರಿಗೂ ಉತ್ತೇಜನ ಕೊಡಲು ಉಪಯೋಗಿಸಿ ನದ್ಗ್ರಂಥಗಳನ್ನು ಬರೆಸಿ ಇಡೀ ಕನ್ನಡ ನಾಡಿನ ಎರಡು ಕೋಟಿ ಜನರಿಗೂ ಕೂಡ ಸೌಲಭ್ಯವನ್ನುಂಟುಮಾಡಿ, ಸುಲಭ ಬೆಲೆಯಲ್ಲಿ ಪುಸ್ತಕಗಳು ಸಿಕ್ಕುವ ಹಾಗೆ ಮಾಡಿದರೆ ನಿಜವಾಗಿಯೂ ಕೂಡ ಸಂಸ್ಕೃತಿ ಪ್ರತಿಯೊಂದು ಭಾಗಕ್ಕೂ ಹರಡಿದಹಾಗಾಗುತ್ತದೆ. ನನ್ನ ವೈಯುಕ್ತಿಕವಾದ ಅಭಿಪ್ರಾಯದಲ್ಲಿ ಭಾಷಣ ಮಾಡಿಯಾಗಲಿ ಅಥವಾ ಕಾವ್ಯ ಓದಿಯಾಗಲಿ ಅಥವಾ ಲಾವಣಿ ಹೇಳಿಯಾಗಲಿ ಸಂಸ್ಕೃತಿ ಪ್ರಸಾರ ಮಾಡುವುದಕ್ಕೆ ಖಂಡಿತ ಆಗುವುದಿಲ್ಲ. ಒಮ್ಮೊಮ್ಮೆ ಒಳ್ಳೆಯ ಉದ್ಗ್ರಂಥಗಳೇನು ನಮ್ಮಲ್ಲಿವೆಯೋ ಅಥವಾ ಒಳ್ಳೆಯ ಕಾವ್ಯಗಳೇನಿವೆಯೋ ಅಥವಾ ಪರಿಣಾಮಕಾರಿಯಾದ ಕಾದಂಬರಿಗಳೇನಿವೆಯೋ ಅವನ್ನು ಅವಲೋಕಿಸುವುದರಿಂದ ಅಕಸ್ಮಾತ್ ನಮ್ಮ ಮನಸ್ಸಿನಲ್ಲಿರುವ ಕಲ್ಮಷಗಳನ್ನು ಕಳೆದುಕೊಳ್ಳಲು ಸಹಾಯವಾಗಬಹುದು. ಕವಿಯ ಭಾವನೆ ಅಥವಾ ಕಾದಂಬರಿಕಾರರು ಚಿತ್ರಿಸಿರುವ ಕಥೆಯ ಸ್ವರೂಪ ಮನಸ್ಸಿನಮೇಲೆ ಪರಿಣಾಮವನ್ನುಂಟುಮಾಡಿದಾಗ ಮಾತ್ರ ಸಾಮಾನ್ಯವಾಗಿ ಒಂದು ಸದ್ಭಾವನೆ ಬೆಳೆದು ಮನಸ್ಸು ಬದಲಾವಣೆಯಾಗಿ ನಮ್ಮಲ್ಲಿರುವ ಕಲ್ಮಷಗಳು ದೂರವಾಗಬಹುದು. ಆ ಸಮಯದಲ್ಲಿ ನಮ್ಮ ಸಂಸ್ಕೃತಿ ಮಟ್ಟವೇನಿವೆಯೋ ಅದು ಒಂದು ಮೆಟ್ಟಿಲು ಮೇಲಕ್ಕೇರುತ್ತದೆ. ಇದು ಮನುಷ್ಯನಲ್ಲಿ ವೈಯಕ್ತಿಕವಾಗಿ ಆಗುವ ಕೆಲಸ, ಉತ್ತಮರ ಸಂಪರ್ಕದಿಂದ ನಡೆನುಡಿ ಅಥವಾ ಮಾತುಕತೆಗಳ ಅದರಿಂದ ನಮ್ಮಮೇಲೆ ಸತ್ಪರಿಣಾಮವಾಗಿ ನಾವು ಸಂಸ್ಕೃತಿವಂತರಾಗಬೇಕೇ ಹೊರತು ಭಾಷಣ ಕೇಳಿ ಸಂಸ್ಕೃತಿವಂತರಾಗುವುದಕ್ಕೆ ಸಾಧ್ಯವಿಲ್ಲ. ಆ ದೃಷ್ಟಿಯಿಂದ ನೀವು ನಿಜವಾಗಿಯೂ ಕೂಡ ಸಂಸ್ಕೃತಿ ಪ್ರಚಾರವನ್ನು ಮಾಡಬೇಕೆಂದು ಮನಸ್ಸುಳ್ಳವರಾಗಿದ್ದರೆ, ಸಂಸ್ಕೃತಿ ಪ್ರಚಾರ ಬಹಳ ಪರಿಣಾಮಕಾರಿಯಾಗಿ ಕನ್ನಡ ನಾಡಿನಲ್ಲಿ ಆಗಬೇಕೆಂಬ ಆಸೆ ನಿಮಗಿದ್ದರೆ, ಶ್ರೀಮಾನ್ ರಾಮಯ್ಯನವರು ಹೇಳಿದಹಾಗೆ, ಈ ನಿರ್ಣಯವನ್ನು ಒಪ್ಪಿಕೊಂಡು ಹತ್ತು ಲಕ್ಷ ರೂಪಾಯಿಗಳನ್ನು ಒಳ್ಳೆಯ ಉದ್ಗ್ರಂಥಗಳನ್ನು ಬರಯುವವರಿಗೆ ಹಂಚಿ ಅವರಿಂದ ನದ್ಗ್ರಂಥಗಳನ್ನು ಬರೆಸಿ ಅವನ್ನು ಪ್ರತಿಯೊಂದು ಮನೆಗೂ ಸುಲಭ ಬೆಲೆಯಲ್ಲಿ ಹಂಚುವ ಏರ್ಪಾಡು ಮಾಡಿದರೆ ಒಳ್ಳೆಯದಾಗುತ್ತದೆಂಬ ಭಾವನೆಯಿದೆ. ಹಾಗೆ ಮಾಡುವುದಾದರೆ ಎರಡು ವಿಧವಾದ ಸಾಫಲ್ಯವಾಗುತ್ತದೆ. ಒಂದನೆಯದಾಗಿ ಸಂಸ್ಕೃತಿ ಪ್ರಚಾರ ನಿಜವಾಗಿಯೂ ಮಾಡಿದ ಹಾಗಾಗುತ್ತದೆ, ಎರಡನೆಯದಾಗಿ ಕನ್ನಡ ಅಥವಾ ಸಂಸ್ಕೃತ ಪಂಡಿತರಿಗೆ ಬೆಂಬಲ ಕೊಟ್ಟಹಾಗಾಗುತ್ತದೆ. ಕನ್ನಡ ನಾಡಿನಲ್ಲಿ ಬರಹಗಾರರು ಅನೇಕರಿದ್ದಾರೆ. ರಾಮಯ್ಯನವರು ಹೇಳಿದಹಾಗೆ ಅವರಿಗೆ ಬಹಳ ಕಷ್ಟವಿದೆ. ಈಗ ಸಂಸ್ಕೃತಿ ನಿಜವಾಗಿಯೂ ಮನೆಮನೆಗೂ ಹರಡಬೇಕೆಂಬ ಅಭಿಲಾಷೆಯಿರುವುದರಿಂದ ಮತ್ತು ಆ ಬಗ್ಗೆ ನಿರ್ಧಾರ ಮಾಡಿರುವುದರಿಂದ, ಅದರ ಸಾಫಲ್ಯ ಪ್ರತಿ ಪ್ರಜೆಗೂ ದೊರೆಯಬೇಕೆಂಬ ಉದಾತ್ತಧ್ಯೇಯವಿರುವುದರಿಂದ ಈಗ ಸಂಸ್ಕೃತಿ ಪ್ರಚಾರಕ್ಕಾಗಿ ಮೀಸಲಾಗಿಟ್ಟಿರುವ ಹತ್ತು ಲಕ್ಷ ರೂಪಾಯಿಗಳನ್ನು ಅದಕ್ಕೆ ಖರ್ಚುಮಾಡದೆ—ಅದರ ರೂಪು ರೇಖೆಗಳನ್ನು ಈಗ ವರ್ಣನೆ ಮಾಡುವುದಿಲ್ಲ—ನಮ್ಮ ಸರ್ಕಾರ ಮೈಸೂರು ಅಕ್ಯಾಡೆಮಿ ಆಫ್ ಡ್ರಾಮ, ಡ್ಯಾನ್ಸ್ ಅಂಡ್ ಮ್ಯೂಸಿಕ್ ಎಂಬುದಕ್ಕೆ ವಿನಿಯೋಗಿಸಬೇಕೆಂದಿರುವ ಹಣವನ್ನು ಭಾರತ ಸರ್ಕಾರದವರು ಹಾಕಿಕೊಟ್ಟಿರುವ ಉದಾಹರಣೆಯನ್ನನುಸರಿಸಿ ಸರಿಯಾದ ಪುಸ್ತಕಗಳನ್ನು ಬರೆಸಿ ಬರೆಯುವವರಿಗೆ ಅವಾರ್ಡು ಕೊಡುವ ಹಾಗೆಮಾಡಿ ಉತ್ತಮ ಮಟ್ಟದ ಸಾಹಿತ್ಯ ಬೆಳೆಯುವುದಕ್ಕೂ ಮತ್ತು ತನ್ಮೂಲಕ ಸಂಸ್ಕೃತಿ ಪ್ರಚಾರ ಮಾಡುವುದಕ್ಕೂ ಅನುಕೂಲ ಮಾಡಬೇಕು. ಇದಕ್ಕಾಗಿ ಹೆಚ್ಚು ಖರ್ಚು ಮಾಡಬೇಕಾಗಿಲ್ಲ. ಸಂಸ್ಕೃತಿ ಪ್ರಚಾರಕ್ಕಾಗಿ ಮುಡುಪಾಗಿಟ್ಟಿರುವ ಹಣವನ್ನೇ ಇದಕ್ಕೆ ಉಪಯೋಗಿಸಿ, ಸಂಸ್ಕೃತಿ ಪ್ರಚಾರದ ಅಡಳಿತವನ್ನು ನಡೆಸುವ ಸಂಸ್ಥೆಯಾವುದಿದೆಯೋ ಅದೇ ಸಂಸ್ಥೆಯನ್ನು ಇದಕ್ಕಾಗಿ ಉಪಯೋಗಿಸಿಕೊಳ್ಳಬಹುದು, ಅಕ್ಯಾಡೆಮಿ ಆಫ್ ಡ್ರಾಮ ಮೊದಲಾದುವಕ್ಕೆ ಇರುವ ಸಂಸ್ಥೆಯನ್ನೇ ಇದಕ್ಕೂ ಉಪಯೋಗ ಮಾಡಿಕೊಳ್ಳಬಹುದು. ಲಿಟರೇಚರ್, ಸಾಹಿತ್ಯ ಎಂಬುದು ಸಂಸ್ಕೃತಿಗೆ ಸಂಬಂಧಪಟ್ಟ ಒಂದು ಅಂಗ. ಸಂಸ್ಕೃತಿಯ ಪರಮ ಉತ್ಕೃಷ್ಟವಾದ ಅಂಗವೆಂದರೆ ಸಾಹಿತ್ಯ. ಸಾಹಿತ್ಯ, ಕಲೆ ಇವೆರ್ಲಾ ಒಂದೇ ಮಟ್ಟದಲ್ಲಿವೆ. ಮ್ಯೂಸಿಕ್, ಡ್ರಾಮ ಇವುಗಳೂ ಸಹ ಇದಕ್ಕೆ ಸಂಬಂಧಪಟ್ಟಿವೆ. ಹಾಗೆ ಸಂಬಂಧವಿರುವುದರಿಂದ ಈಗಿರುವ ಅಕ್ಯಾಡಮಿ ಅಡ್ಮಿನಿಸ್ಟರ್ ಮಾಡಿ ಅದರ ಮುಖೇನ ನಮ್ಮ ಉದ್ದೇಶ ಸಾಧನೆ ಮಾಡಲು ಅವಕಾಶವಿದೆ, ಹಾಗೆ ಮಾಡುವುದು ಕೂಡ ಸೂಕ್ತವಾಗಿದೆ. ಸಾಮಾನ್ಯವಾಗಿ ಸಂಸ್ಕೃತಿ ಪ್ರಚಾರವನ್ನು ಭಾಷಣ, ಡ್ರಾನ್ಸ್, ಮ್ಯೂಸಿಕ್ ಮುಂತಾದುವುಗಳಿಂದ ಮಾಡುವುದಕ್ಕಿಂತ ಪರಮ ಉತ್ಕೃಷ್ಟವಾದ ಒಂದು ಮಾರ್ಗವೆಂದರೆ ಒಳ್ಳೆಯ ಉಜ್ವಲವಾದ ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿ ಉತ್ತಮರಾದ ಬರಹಗಾರರಿಗೆ ಸಂಸ್ಕೃತಿ ಪ್ರಚಾರಕಾಗಿ ಮೀಸಲಾಗಿಟ್ಟಿರುವ ಹಣವನ್ನು ಒದಗಿಸಿ ಈ ಸಂಬಂಧವಾಗಿ ಏರ್ಪಡಿಸಲ್ಪಟ್ಟಿರುವ ಅಕ್ಯಾಡಮಿಯೇ ಅಡ್ಮಿನಿಸ್ಟರ್ ಮಾಡುವುದಕ್ಕೆ

ಕ್ರಮವನ್ನು ಪಡುವುದು. ಆ ರೀತಿ ಮಾಡಬೇಕೆಂಬ ಒಂದು ಆಸೆಯಿದೆ. ಆ ದೃಷ್ಟಿಯಿಂದ ರಾಮಯ್ಯನವರ ನಿರ್ಣಯವನ್ನು ಸರ್ಕಾರ ಒಪ್ಪಿ ಅದರಂತೆ ನಡೆದರೆ ದೇಶಕ್ಕೆ ಒಳ್ಳೆಯದಾಗುತ್ತದೆಂದು ನೂಚಿಸಿ ಈ ನಿರ್ಣಯವನ್ನು ಪುಷ್ಟೀಕರಿಸುತ್ತೇನೆ.

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು ಉತ್ತರ — ಅನುಸೂಚಿತಜಾತಿಗಳು).—ಸ್ವಾಮಿ, ಶ್ರೀಮಾನ್ ರಾಮಯ್ಯನವರು ತಂದಿರುವ ಈ ನಿರ್ಣಯವನ್ನು ಸ್ವಾಗತಿಸುವುದಕ್ಕಾಗಿ ನಾನು ನಿಂತಿದ್ದೇನೆ. ಅವರ ನಿರ್ಣಯದಲ್ಲಿ "ಭಾರತ ಸಂಸ್ಕೃತಿಯನ್ನು ಪ್ರಚಾರ ಮಾಡುವುದಕ್ಕಾಗಿ" ಎಂದು ಹೇಳಿದೆ. ನಾವೆಲ್ಲರೂ ತಿಳಿದಿರುವಂತೆ ನಮ್ಮ ದೇಶದ ಸಂಸ್ಕೃತಿ ಬಹಳ ಶ್ರೇಷ್ಠತರದ್ದು. ಈಗ ಕೆಲವು ವರ್ಷಗಳಿಂದೀಚೆಗೆ ಅಂದರೆ ಯುದ್ಧ ನಡೆದ ನಂತರ ನಮ್ಮ ದೇಶದ ಸಂಸ್ಕೃತಿಗೆ ಏನೋ ಒಂದು ಕುಂದು ಬಂದಿರುವ ಹಾಗಿದೆ. ಯುದ್ಧ ನಡೆಯುವ ಕಾಲದಲ್ಲಿ ಕ್ಷಾಮ ಬಂದು ಮನುಷ್ಯ ತನ್ನ ಜೀವನ ನಡೆಸಿಕೊಳ್ಳುವುದಕ್ಕೆ, ಆಹಾರ ಒದಗಿಸಿಕೊಳ್ಳುವುದಕ್ಕೆ, ತನ್ನ ಅನುಕೂಲ ನೋಡಿಕೊಳ್ಳುವುದಕ್ಕೆ ಸತ್ಯವನ್ನು ಮರೆತನು. ಸತ್ಯವೇ ಸಂಸ್ಕೃತಿಯ ಮೂಲಾಧಾರ. ಇತರರ ಸುಖ ಮರೆತು ತನ್ನ ಸ್ವಾರ್ಥತೆಗಾಗಿ ಇತರರ ಸುಖಗಳಿಗೆ ಅಡ್ಡಿಬರುವುದಕ್ಕೆ ಮನುಷ್ಯ ಪ್ರಾರಂಭ ಮಾಡಿದ್ದಾನೆ. ಇದು ನಮ್ಮ ದೇಶದ ಸಂಸ್ಕೃತಿಗೆ ಸಂಪೂರ್ಣವಾಗಿ ವಿರೋಧವಾಗಿದೆ. ನಮ್ಮ ದೇಶದ ಸಂಸ್ಕೃತಿ ತ್ಯಾಗ ಮತ್ತು ಸತ್ಯ ಈ ಎರಡರಮೇಲೆ ನಿಂತಿದೆ. ಈ ದಿವಸ ನಮ್ಮ ದೇಶದಲ್ಲಿ ನಡೆಯುತ್ತಿರುವ ಸಂಸ್ಕೃತಿ ಪ್ರಚಾರದ ಮುಖ್ಯೋದ್ದೇಶ ನಮ್ಮ ಜನರಿಗೆ ನಮ್ಮ ಸಂಸ್ಕೃತಿಗನುಗುಣವಾದ ನಡೆ-ನುಡಿಗಳು ಹೇಗಿರಬೇಕು ಎಂಬುದನ್ನು ತಿಳಿಸಬೇಕೆಂಬುದೇ ಆಗಿದೆ. ಆದರೆ ಈಗಿನ ಈ ಸಂಸ್ಕೃತಿ ಪ್ರಚಾರದಲ್ಲಿ ಭಾಗವಹಿಸಿ. ಭಾಷಣ ಮಾಡಲು ಹೋಗುತ್ತಿರುವಂಥ ಭಾಷಣಕಾರರಿಗೆ ಏನು ದಕ್ಷತೆಯಿದೆ ಎನ್ನುವುದನ್ನು ಅವರು ಭಾಷಣ ಮಾಡುತ್ತಿದ್ದಂಥ ಕಾಲದಲ್ಲಿ ಅವರ ಭಾಷಣವನ್ನು ಕೇಳುತ್ತಿದ್ದಂಥ ಜನರಲ್ಲಿ ನಾನು ಒಬ್ಬನಾಗಿದ್ದು ಕೊಂಡು ತಿಳಿದವನಾಗಿದ್ದೇನೆ. ಆದರೆ ಹಾಗೆ ಭಾಷಣ ಮಾಡಲು ಬರುತಕ್ಕಂಥ ಭಾಷಣಕಾರರಲ್ಲಿ ಬಹುಭಾಗ ಅವರ ನಡೆಗೂ-ನುಡಿಗೂ ವ್ಯತ್ಯಾಸ ಕಾಣುತ್ತದೆ. ಆದಕಾರಣ ಸರ್ಕಾರದವರು ಹೀಗೆ ಪ್ರಚಾರ ಕಾರ್ಯಕ್ಕೆ ನೇಮಿಸತಕ್ಕಂಥ ಭಾಷಣಕಾರರು ಎಂಥವರಾಗಿರಬೇಕು ಎಂಬುದನ್ನು ಈಗ ತಾನೆ ಶ್ರೀ ಪಿ. ಆರ್. ರಾಮಯ್ಯನವರು ಹೇಳಿದ್ದು ಬಹಳ ಚೆನ್ನಾಗಿದೆ ಎಂಬುದನ್ನು ನಮೂರ್ದನೆ ಮಾಡಬೇಕೆಂಬ ಉದ್ದೇಶದಿಂದ ನಾನೀಗ ಎರಡು ಮಾತುಗಳನ್ನಾಡಲು ನಿಂತಿದ್ದೇನೆ. ಈ ದಿವಸ ಈ ಸಂಸ್ಕೃತಿ ಪ್ರಚಾರ ಕಾರ್ಯದ ಅಂಗವಾಗಿ ಕೆಲವರು ಏನು ಒಂದು ಭಾಷಣ ಮಾಡಲು ಹೋಗುತ್ತಿದ್ದಾರೋ ಅಂಥವರು ತಮ್ಮ ನಡೆತೆ ಏನಿದೆಯೋ ಅದಕ್ಕೆ ವಿರುದ್ಧವಾಗಿ ತಮ್ಮ ನುಡಿಗಳನ್ನು ಹೇಳುತ್ತಿರುತ್ತಾರೆ. ಅವರು ಹೇಳುತ್ತಿರುವಂಥ ಅಂಶಗಳೆಲ್ಲಾ ಅವರ ನಡತೆಯಲ್ಲಿ ವೆಯೇ ಎಂಬುದನ್ನು ಅವರು ಅವಲೋಕಿಸದೆ ಮಾತನಾಡುತ್ತಿರುತ್ತಾರೆ. ಹೀಗೆ ಜನರು ತಮ್ಮ ನಡತೆಯೇ ಒಂದಾಗಿದ್ದು-ತಮ್ಮ ನಡೆಯೇ ಬೇರೆಯಾಗಿದ್ದರೆ ಅಂಥವರು ಮಾಡತಕ್ಕ ಭಾಷಣಗಳಿಗೆ ಜನರು ಯಾವರೀತಿಯ ಗೌರವವನ್ನು ಕೊಡುತ್ತಾರೆ ಎಂಬುದನ್ನು ನಾನು ಒತ್ತಿ ಹೇಳಬೇಕಾಗಿಲ್ಲ. ಕೆಲವರು ತಾವು ಮಾಡತಕ್ಕ ಭಾಷಣಕ್ಕಾಗಿ ಒಂದು ಸಂಭಾವನೆ ದೊರೆಯುತ್ತದೆ ಎಂಬ ಉದ್ದೇಶದಿಂದಲೇ ಸೇರಿಕೊಂಡಿರುತ್ತಾರೆ. ಆದಕಾರಣ ಈಗ ಅಂಥ ನಡೆ-ನುಡಿಗಳಲ್ಲಿ ವ್ಯತ್ಯಾಸ ವಿರತಕ್ಕಂಥ ಜನರಿಗೆ ಭಾಷಣ ಮಾಡಲು ದೊರೆತಿರುವ ಅವಕಾಶವನ್ನು ತಪ್ಪಿಸಬೇಕಾಗಿದೆ. ಭಾಷಣಕಾರರನ್ನು ಸರ್ಕಾರದವರು ನೇಮಕಮಾಡಿಕೊಳ್ಳುವಾಗ ಅನೇಕ ರೀತಿಯಲ್ಲಿ ಅವರ ನಡೆ-ನುಡಿ, ಅವರ ಯೋಗ್ಯತೆ, ಅವರ ವಿದ್ಯಾರ್ಹತೆ ಇತ್ಯಾದಿಗಳನ್ನೆಲ್ಲಾ ಚೆನ್ನಾಗಿ ಪರೀಕ್ಷೆಮಾಡಿ ಯೋಗ್ಯರಾಗಿರತಕ್ಕಂಥ ಜನರನ್ನೇ ಪ್ರಚಾರ ಕಾರ್ಯದಲ್ಲಿ ಭಾಷಣಕಾರರಾಗಿರಲು ನೇಮಿಸತಕ್ಕದ್ದು ಮತ್ತು ಅಂಥವರನ್ನೇ ಭಾಷಣ ಮಾಡಲು ಕಳುಹಿಸತಕ್ಕದ್ದು ಉಚಿತವಾದದ್ದು ಎಂಬ ನೀತಿಯನ್ನು ಅನುಸರಿಸಬೇಕೆಂದು ನಾನೀಗ ಮಾತನಾಡುತ್ತಿದ್ದೇನೆ. ಈ ಉದ್ದೇಶದಿಂದಲೇ ಈ ನಿರ್ಣಯದಲ್ಲಿ ಮಾನ್ಯ ಶ್ರೀ ಪಿ. ಆರ್. ರಾಮಯ್ಯನವರು "ಜನತೆಯಲ್ಲಿ ಭಾರತ ಸಂಸ್ಕೃತಿಯನ್ನು ಪ್ರಚಾರ ಮಾಡುವುದಕ್ಕಾಗಿ ಸಂಸ್ಥಾನದಲ್ಲಿರುವ ಕನ್ನಡ ಮತ್ತು ಸಂಸ್ಕೃತ ವಿದ್ವಾಂಸರಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು" ಎಂಬುದಾಗಿ ಹೇಳಿದ್ದಾರೆ. ಖಂಡಿತವಾಗಿಯೂ ಇದಕ್ಕೆ ಪ್ರೋತ್ಸಾಹ ನೀಡಬೇಕೆಂದು ನಾನು ಬೆಂಬಲ ನೀಡುತ್ತೇನೆ. ಅಲ್ಲದೆ ಇತ್ತೀಚೆಗೆ ನಮ್ಮಲ್ಲಿ ಅನೇಕರು ಈ ಇಂಗ್ಲೀಷ್ ಗ್ರಂಥಗಳ ವ್ಯಾಮೋಹದಿಂದ ನಮ್ಮಲ್ಲಿರತಕ್ಕ ಅನೇಕ ಅಮೋಘವಾದ ಗ್ರಂಥಗಳನ್ನು ಮರೆತು ಬಿಟ್ಟಿರುತ್ತಾರೆ. ಅಮೋಘವಾದ ಗ್ರಂಥಗಳ ಪೈಕಿ ಕೆಲವು ಪವಿತ್ರವಾದಂಥ ಎಂದರೆ ರಾಮಾಯಣ, ಮಹಾಭಾರತ ಹರಿಶ್ಚಂದ್ರ ಕಾವ್ಯ ಮತ್ತು ಭಗವದ್ಗೀತೆ ಇತ್ಯಾದಿ ಗ್ರಂಥಗಳನ್ನು ಪಠಣೆ ಮಾಡತಕ್ಕವರು ಅಲ್ಲಲ್ಲೇ ಕೆಲವರು ಹಳ್ಳಿಗಳಲ್ಲೂ ಮತ್ತು ಪಟ್ಟಣಗಳಲ್ಲೂ ಇರುತ್ತಾರೆ. ಆದರೆ ಬೇರೆ ಕೆಲವರಲ್ಲ ಆ ಇಂಗ್ಲೀಷ್ ಭಾಷೆಯ ಮೇಲಿರತಕ್ಕ ವ್ಯಾಮೋಹದಿಂದ ಈ ಗ್ರಂಥಗಳ ಬಗ್ಗೆ ಒಂದು ತಿರಸ್ಕಾರ ಮನೋಭಾವ ಉಕ್ಕಿ ಹರಿಯುತ್ತಿದೆ ಅಂಥವರು ಈ ಗ್ರಂಥಗಳನ್ನು ಅವಹೇಳನ ಮಾಡುತ್ತಿದ್ದಾರೆ. ಇದನ್ನು ತಪ್ಪಿಸಬೇಕಾದದ್ದು ಅಗತ್ಯ. ನಮ್ಮ ದೇಶದಲ್ಲರತಕ್ಕ ಅಜ್ಞಾನದ ಜನರಿಗೂ ವಿದ್ಯಾ ಜನ ಸಾಮಾನ್ಯರಿಗೂ ಈ ನಮ್ಮ ಭಾರತದ ಸಂಸ್ಕೃತಿ ಎಂಥಾದ್ದು ಎಂಬುದನ್ನು ತಿಳಿಸಿ ಇದರ ಬಗ್ಗೆ ಅವರಿಗೆ ಒಂದು ಅಭಿಮಾನ ಹುಟ್ಟುವಂತೆ ಮಾಡತಕ್ಕ ಜನಗಳಿಗೆ ನಾವು ನಿಜವಾಗಿಯೂ ಪ್ರೋತ್ಸಾಹ ನೀಡಲೇಬೇಕು. ನಿಜವಾಗಿಯೂ ಅಂಥ ವಿದ್ಯಾಂಸರು ಯಾರಿದ್ದಾರೆ ಎನ್ನುವುದನ್ನು ಕಂಡುಹಿಡಿದು ಅಂಥವರಿಗೆ ಮಾತ್ರವೇ ಈ ಕಾರ್ಯದಲ್ಲಿ ಭಾಗವಹಿಸಲು ಅವಕಾಶನೀಡಬೇಕೆಂಬುದನ್ನು ನಾನೀಗ ನಮೂರ್ದನೆ ಮಾಡುತ್ತಿದ್ದೇನೆ. ನಮ್ಮ ದೇಶದಲ್ಲಿ ಎಲ್ಲ ವಿಷಯಗಳಿಗೂ ಪ್ರೋತ್ಸಾಹ ದೊರೆಯುತ್ತಿದೆ. ಈಗ ದೇಶಾದ್ಯಂತವೂ ಸಂಸ್ಕೃತಿ ಪ್ರಚಾರ ಕಾರ್ಯವನ್ನು ಕೈಗೊಂಡಿರತಕ್ಕ ಸರ್ಕಾರ ನಮ್ಮದೊಂದೆ ಹೊರತು ಮತ್ತೊಂದಿಲ್ಲ. ಆದರೆ ನಮ್ಮ ದೇಶದಲ್ಲಿ ಎಲ್ಲಾ ವಿಷಯಗಳಿಗೂ ಎಲ್ಲಾ ಇಲಾಖೆಗಳಲ್ಲೂ ಪ್ರೋತ್ಸಾಹ ದೊರೆಯುತ್ತಿದೆ. ಆದರೆ ಈ ಸಂಸ್ಕೃತಿ ಪ್ರಸಾರಕ್ಕೆ ಸಂಬಂಧ ಪಟ್ಟ ವಿಷಯಗಳಿಗೆ ಮಾತ್ರ ಇಲಾಖೆಯವರಿಂದಲೂ ಪ್ರೋತ್ಸಾಹ ದೊರೆಯುತ್ತಿಲ್ಲ-ಜನರಿಂದಲೂ ಪ್ರೋತ್ಸಾಹ ದೊರೆಯುತ್ತಿಲ್ಲ. ಈ ಕಾರಣದಿಂದ ಈಗಾಗಲೇ ಮಾತನಾಡಿದ ಶ್ರೀಮಾನ್ ಎಂ ಲಿಂಗಣ್ಣನವರು ಹೇಳಿದ ಹಾಗೆ, ಸುಲಭ ಶೈಲಿಯಲ್ಲಿ ಮತ್ತು ಸುಲಭ ದರದಲ್ಲಿ ಜನ ಸಾಮಾನ್ಯರಿಗೆ ತಿಳಿವಳಿಕೆ ಕೊಡತಕ್ಕಂಥ ಅನೇಕ ಪುಸ್ತಕಗಳನ್ನು ಅಚ್ಚು ಹಾಕಿಸುವುದು, ವ್ಯರ್ಥಾ ಈ ಭಾಷಣಕಾರರುಗಳಿಗೆ ಹಣವನ್ನು ಕೊಟ್ಟು ಹಾಳುಮಾಡುವುದಕ್ಕಿಂತ ಬಹಳ ಉನ್ನತವಾದಂಥ ಅಭಿಪ್ರಾಯವಾಗಿದೆ ಎಂಬುದನ್ನು ನಾನೂ ಕೂಡ ಅನುಮೋದಿಸುತ್ತೇನೆ. ಹೀಗೆ ಕನ್ನಡ

(ಶ್ರೀ ಆರ್. ಮುನಿಸ್ವಾಮಯ್ಯ)

ಮತ್ತು ನಂಸ್ಕೃತದಲ್ಲಿ ಹೆಚ್ಚು ಹೆಚ್ಚು ಪುಸ್ತಕಗಳನ್ನು ನಮ್ಮ ಭಾರತ ಸಂಸ್ಕೃತಿಯ ಬಗ್ಗೆ ಅಚ್ಚುಹಾಕಿಸಿ ಅಲ್ಲಲ್ಲೇ ಪುಸ್ತಕ ಭಂಡಾರಗಳನ್ನು ಏರ್ಪಡಿಸುವುದು ಬಹಳ ಒಳ್ಳೆಯದೆಂದು ಹೇಳಿ ನಾನು ಈ ನಿರ್ಣಯವನ್ನು ಸಮರ್ಥಿಸುತ್ತೇನೆ.

ಶ್ರೀ ಎ. ಜಿ. ರಾಮಚಂದ್ರರಾವ್ (ನ್ಯಾಯಾಂಗ ಮತ್ತು ವಿದ್ಯಾ ಸಚಿವರು).—ಸ್ವಾಮಿ, ಈ ಭಾರತ ಸಂಸ್ಕೃತಿಯ ವಿಚಾರವಾಗಿ ಶ್ರೀಮಾನ್ ಪಿ. ಆರ್. ರಾಮಯ್ಯನವರು ಈಗ ತಂದಿರತಕ್ಕಂಥ ನಿರ್ಣಯದಲ್ಲಿ ಕನ್ನಡ ಮತ್ತು ಸಂಸ್ಕೃತ ವಿದ್ಯಾಪಂತರಿಗೆ ಗೌರವ ಸಂಭಾವನೆ ಕೊಟ್ಟು ಪ್ರೋತ್ಸಾಹ ನೀಡಬೇಕೆಂದು ಏನೊಂದು ಅಂಶವನ್ನು ಅವರು ತಮ್ಮ ನಿರ್ಣಯದಲ್ಲಿ ಸೂಚಿಸಿದ್ದಾರೋ ಆ ವಿಚಾರದಲ್ಲಿ ಆ ಮಾನ್ಯ ಸದಸ್ಯರಿಗೂ ಮತ್ತು ನಮ್ಮ ಸರ್ಕಾರಕ್ಕೂ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಆದರೆ ಅವರು ತಮ್ಮ ನಿರ್ಣಯದಲ್ಲಿ ಇನ್ನೂ ಉತ್ತಮ ಸಂಭಾವನೆಕೊಟ್ಟು ಇದಕ್ಕೆ ಪ್ರೋತ್ಸಾಹ ನೀಡಬೇಕೆಂದು ಹೇಳಿದ್ದಾರೆ. ಆದರೆ ನಮ್ಮ ಸರ್ಕಾರ ಈಗಾಗಲೇ ಈ ಭಾಷಣಕಾರರಿಗೆ ಸಾಕಷ್ಟು, ಒಂದುಪೇಳೆ ಅವರು ನಿರೀಕ್ಷಮಾಡಿಕೊಂಡಿದ್ದಷ್ಟು ಅಲ್ಲದಿದ್ದರೂ, ಭತ್ಯ ಮತ್ತು ಗೌರವ ಸಂಭಾವನೆಗಳನ್ನು ಕೊಡುತ್ತಿದೆ. ಜನರೂ ಸಹ ಸಾಕಷ್ಟು ಉತ್ತೇಜನ ಕೊಡುತ್ತಿದ್ದಾರೆ. ಆದರೆ ಈ ವಿಚಾರದಲ್ಲಿ ಕೊಡತಕ್ಕ ಸಂಭಾವನೆಯನ್ನು ಇನ್ನೂ ಸ್ವಲ್ಪ ಹೆಚ್ಚಿಸಬೇಕಾಗಿದ್ದರೆ ಅಥವಾ ಈ ಗೌರವ ಸಂಭಾವನೆಗಳನ್ನು ಇನ್ನೂ ಉತ್ತಮಗೊಳಿಸಬೇಕಾಗಿದ್ದರೆ ನಾವು ಈ ವಿಚಾರದಲ್ಲಿ ಸ್ವಲ್ಪಕಾಲ ಕಾದುನೋಡಬೇಕಾಗಿದೆ. ನಾಟಕ-ಸಂಗೀತ ಇವೆಲ್ಲವೂ ಕಲೆಯ ಒಂದೊಂದು ಭಾಗ. ಇವುಗಳಿಗೂ ಸಹ ಉತ್ತೇಜನವನ್ನು ನೀಡಲಾಗುತ್ತಿದೆ. ಹೀಗೆ ಈ ಎಲ್ಲಾ ಕಲೆಗಳಿಗೂ ನಮ್ಮ ಸರ್ಕಾರ ಉತ್ತೇಜನ ಕೊಡುತ್ತಿರುವ ಹಾಗೆ ಮತ್ತೆ ಎಲ್ಲಿ ಯಾವ ಸರ್ಕಾರಗಳೂ ಕೊಡುತ್ತಿಲ್ಲ. ಆದ ಕಾರಣ ನಾವು ಈ ಬಗ್ಗೆ ಸ್ವಲ್ಪ ಕಾಲ ಕಾದು ಯಾವ ಸ್ಥಿತಿಗೆ ಈ ವಿಚಾರಗಳೆಲ್ಲಾ ನಿಲ್ಲುತ್ತವೆಂಬುದನ್ನು ನೋಡಿಕೊಂಡು ಬಾಕಿ ವಿಷಯದಲ್ಲಿ ನಾವು ಮುಂದುವರಿಯುವುದು ಒಳ್ಳೆಯದು. ಆದಕಾರಣ ಈಗ ನಮ್ಮ ಸರ್ಕಾರ ಈಗ ಕೊಡುತ್ತಿರುವ ಪ್ರೋತ್ಸಾಹ ಸಾಕೆಂದು ಕಾಣುತ್ತಿದೆ. ಆದಪ್ರಯುಕ್ತ ಈ ನಿರ್ಣಯವನ್ನು ಈಗ ಮಾನ್ಯ ಸದಸ್ಯರು ವಾಪಸ್ಸು ತೆಗೆದುಕೊಳ್ಳುವುದು ಒಳ್ಳೆಯದೆಂದು ಹೇಳುತ್ತೇನೆ.

Mr. DEPUTY SPEAKER.—What does the Hon'ble Member say ?

Sri P. R. RAMAIYA.—I don't press the Resolution.

The resolution was, by leave, withdrawn.

No. 16. Extending the period prescribed for safeguarding the interests of Scheduled Castes and Tribes by ten years.

ಶ್ರೀ ಸಿ. ಟಿ. ಹನುಮಂತಯ್ಯ (ಶಾವಗದ—ಅನುಸೂಚಿತ ಜಾತಿಗಳು).—ಸ್ವಾಮಿ, ನನ್ನ ನಿರ್ಣಯವು ಈ ರೀತಿಯಾಗಿದೆ :

"ನಮ್ಮ ತರಗತಿಗಳಿಗೆ ಸೇರಿದ ಜನರು ಸರ್ವತೋಮುಖವಾಗಿ ಅಭಿವೃದ್ಧಿ ಹೊಂದುವುದಕ್ಕೂ ಮತ್ತು ಅವರ ಹಕ್ಕು ಬಾಧ್ಯತೆಗಳಿಗೆ ಬಾಧಕ ಉಂಟಾಗದಂತಿರುವುದಕ್ಕೂ ಅವಕಾಶ ವಿರುವಂತೆ ಷೆಡ್ಯೂಲ್ಡ್ ಜಾತಿಗಳವರ ಮತ್ತು ಷೆಡ್ಯೂಲ್ಡ್ ಪಂಗಡಗಳವರ ಹಿತವನ್ನು ಕಾಪಾಡಲು ಭಾರತದ ಸಂವಿಧಾನದ ಮೇರೆಗೆ ಗೊತ್ತು ಮಾಡಿರತಕ್ಕ ಅವಧಿಯನ್ನು ಇನ್ನೂ 10 ವರ್ಷಗಳವರೆಗೆ ಹೆಚ್ಚಿಸಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ."

ಸ್ವಾಮಿ, ಈ ನಿರ್ಣಯವನ್ನು ನಾನು ಸಭೆಯ ಮುಂದಿಡುತ್ತ ಈ ಸಭೆಯಲ್ಲಿರತಕ್ಕ ಮಾನ್ಯ ಸದಸ್ಯರೆಲ್ಲರೂ ಈ ನಿರ್ಣಯಕ್ಕೆ ಅವರ ಸಂಪೂರ್ಣ ಬೆಂಬಲವನ್ನು ನೀಡಬೇಕೆಂದು ಪ್ರಾರ್ಥಿಸಿ, ನಾನು ಈ ಬಗ್ಗೆ ಕೆಲವು ವಿಷಯಗಳನ್ನು ಸಭೆಯ ಮುಂದಿಡಲು ಇಚ್ಛಿಸಿದ್ದೇನೆ. ನಮ್ಮ ಭಾರತ ಸರ್ಕಾರದವರು ರಾಜ್ಯಾಂಗದಲ್ಲಿ ಈ ಷೆಡ್ಯೂಲ್ಡ್ ಪಂಗಡಗಳವರ ಅಭಿವೃದ್ಧಿಗಾಗಿ ಹತ್ತು ವರ್ಷಗಳ ಒಂದು ಕಾಲಾವಧಿಯನ್ನು ಗೊತ್ತುಮಾಡಿದ್ದಾರೆ. ಈ ಅವಧಿ ಈಗಾಗಲೇ ಸಮಾಪ್ತಿಸುತ್ತಾ ಬಂದಿದೆ. ಆದುದರಿಂದ ನಾವು ಈ ವಿಚಾರದಲ್ಲಿ ಈಗಿನಿಂದಲೇ ಎಚ್ಚರಿಕೆಯಿಂದಿರುವುದು ಒಳ್ಳೆಯದೆಂದು ಭಾವಿಸಿ ನಾನೀಗ ಈ ನಿರ್ಣಯವನ್ನು ತಂದಿದ್ದೇನೆ. ನಮ್ಮ ದೇಶದಲ್ಲಿ ನಮ್ಮ ಹರಿಜನರ ಸಂಖ್ಯೆ ಸುಮಾರು 20 ಲಕ್ಷಕ್ಕೆ ಮೇಲಿರುತ್ತದೆ. ಇಷ್ಟಿದ್ದರೂ ಈವರೆಗೂ ಈ ಜನಾಂಗದವರಿಗೋಸ್ಕರವಾಗಿ ಈ ಎಲ್.ಎ., ಎಲ್.ಸಿ. ಮತ್ತು ಜಿಲ್ಲಾ ಬೋರ್ಡ್‌ಗಳಲ್ಲಿ ಕೆಲವು ಸ್ಥಾನಗಳನ್ನು ಮೀಸಲಾಗಿಟ್ಟಿದ್ದರು. ಆದರೆ ಈಗ ಏನೊಂದು ಈ ಹತ್ತು ವರ್ಷದ ಅವಧಿ ಇದೆಯೋ ಇದು ಪೂರೈಸಿದನಂತರ ಈ ಜನಾಂಗದವರಿಗೆ ಎಲ್ಲಿಯೂ ಯಾವ ಸ್ಥಾನಗಳನ್ನೂ ಮೀಸಲಾಗಿಡುವುದಿಲ್ಲವೆಂದೂ ಇವರು ಇತರ ಜನಾಂಗದವರಂತೆ ಚುನಾವಣೆಗೆ ನಿಂತು ತಮ್ಮ ಹಕ್ಕನ್ನು ಕಾಪಾಡಿಕೊಳ್ಳಬೇಕೆಂದೂ ತಿಳಿಸಲಾಗಿದೆ. ಹೀಗೆ ಇಲ್ಲಿಯತನಕ ಕೆಲವು ಸ್ಥಾನಗಳನ್ನು ನಮಗೆ ಮೀಸಲಾಗಿಡದಿದ್ದ ಪಕ್ಷದಲ್ಲಿ ನಾವುಗಳಾರೂ ಇಲ್ಲಗೆ ಬರಲು ಸಾಧ್ಯವೇ ಇರುತ್ತಿರಲಿಲ್ಲ. ಈಗಲೂ ಈ ಮೀಸಲಾಗಿಡದೆ ಇದನ್ನು ತಪ್ಪಿಸಿದರೆ ನಾವುಗಳು ಯಾರೂ ಇತರ ಜನಾಂಗದವರನ್ನು ನ್ಪರ್ಧಿಸಿ ಇಂಥ ಸಭೆಗಳಿಗೆ ಬರಲು ಸಾಧ್ಯವಿಲ್ಲ. ಈ ಹಿಂದೆ ಇದೇ ರೀತಿ ಮಹಮ್ಮದೀಯರಿಗೂ ಕೂಡ ಕೆಲವು ಸ್ಥಾನಗಳು ಮೀಸಲಾಗಿದ್ದವು. ಆದ್ದರಿಂದ ಈ ಹಿಂದೆ ಈ ಸಭೆಗೆ 20-30 ಜನ ಮಹಮ್ಮದೀಯ ಸ್ನೇಹಿತರು ಸದಸ್ಯರಾಗಿ ಬರುತ್ತಿದ್ದರು. ಆದರೆ ಈಗ ಅವರಿಗೆ ಅಂಥ ಅವಕಾಶವನ್ನು ತಪ್ಪಿಸಿದ್ದರಿಂದ ಈ ದಿವಸ ಈ ಸಭೆಯಲ್ಲಿ ಅವರು ಇಬ್ಬರೂ ಸಹ ಬರಲು ಸಾಧ್ಯವಿಲ್ಲದಂತಾಗಿದೆ. ಆದರೆ ಈ ವಿಚಾರದಲ್ಲಿ ಮೈನೂರು ಸರ್ಕಾರಕ್ಕೇನೂ ಹಕ್ಕಿಲ್ಲ—ಇದನ್ನು ಭಾರತ ಸರ್ಕಾರದವರೇ ಮಾಡಬೇಕೆಂದು ಒಂದು ಉತ್ತರವನ್ನು ನಮ್ಮ ಸರ್ಕಾರದವರು ತಿಳಿಸಬಹುದು. ಆದರೆ ಇವರಿಗೆ ಆ ಕೇಂದ್ರ ಸರ್ಕಾರಕ್ಕೆ ನೆರಹೆಮಾಡಲು ಅಧಿಕಾರವಿದೆ—ಅವಕಾಶವಿದೆ. ಇದೂ ಅಲ್ಲದೆ ಕೆಲವು ಕಡೆ ನಮಗೆ ಇನ್ನೂ ಹೆಚ್ಚಿನ ಸ್ಥಾನ ಕೊಡಬೇಕಾಗಿತ್ತು. ಈಗ ಕೆಲವು ಕಡೆ ನಾವು general seatನಲ್ಲಿ ನಿಲ್ಲುವುದಕ್ಕೆ ಅವಕಾಶವಿದ್ದರೂ ಕೂಡ, ಒಂದುವೇಳೆ general seatನಲ್ಲಿ contest ಮಾಡುವುದಕ್ಕೆ ಹೋದರೆ ಇಲ್ಲಿ ಬರುವುದಕ್ಕೆ ಆಗುವುದಿಲ್ಲ. ಈಗ ನಮ್ಮ ಅನುಭವದಿಂದ reserve seatಗೆ ಅಸೆಂಬ್ಲಿಗಾಗಲ, ಡಿಸ್ಟ್ರಿಕ್ಟ್ ಬೋರ್ಡಿಗಾಗಲಿ ಕೆಲವು ಕಡೆ ಉತ್ತೀರ್ಣರಾಗಿ ಬಂದು ನಮ್ಮ ಹಕ್ಕು ಬಾಧ್ಯತೆಗಳಿಗೆ ಧಕ್ಕೆಬಾರದ ಹಾಗೆ ಹೊಡೆದಾಡುವುದಕ್ಕೆ ಅವಕಾಶವಿದೆ. ನಾವು ಆರ್ಥಿಕ, ನೈತಿಕ, ಸಾಮಾಜಿಕ ಸ್ಥಿತಿಗಳಲ್ಲಿ ಬಹಳ ಹಿಂದು